ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಎಸ್.ಸಿ.ನಂ.180/2024

ಫಿರ್ಯಾದುದಾರರು ಃ ಸರ್ಕಾರದ ಪರ ದಾಬಸ್ ಪೇಟೆ ಪೊಲೀಸರು

ವಿರುದ್ಧ

ಆರೋಪಿ ಃ ಎ4. ಹಂದಿನಾಗ @ ನಾಗರಾಜ್,
ತಂದೆಃ ರಾಮು,
ವಯಸ್ಸುಃ 38 ವರ್ಷ,
ವಾಸಃ ನಂ.153,
ಶಂಕರ್ ರೋಡ್,
ಜೇನುಕಲ್ ಆಸ್ಪತ್ರೆ ಹತ್ತಿರ,
ತಿಪಟೂರು,
ತುಮಕೂರು.

ದೋಷಾರೋಪಣೆ

ನಾನು ಬಿ.ಎಸ್.ರೇಖಾ, ಬಿ.ಎ.(ಲಾ), ಎಲ್ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನೀವು-ಆರೋಪಿಯಾದ ಹಂದಿನಾಗ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ದಿನಾಂಕ 04-11-2010 ರಂದು ರಾತ್ರಿ ಸುಮಾರು 12.30 ರಿಂದ 01.30 ಗಂಟೆ ಸಮಯದಲ್ಲಿ ದಾಬಸ್ ಪೇಟೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ NH-4 ರಸ್ತೆ, ರಾಯರಪಾಳ್ಯ ಗೇಟಿನ ಬಳಿ ಸಾಕ್ಷಿ.1 ರವರು ತುಮಕೂರಿನಿಂದ ಊರಿಗೆ ಹೋಗಲು ತುಮಕೂರು-ಬೆಂಗಳೂರು NH-4 ರಸ್ತೆಯಲ್ಲಿ KA-04-MG-2727 ನಂಬರ್ ಲ್ಯಾನ್ಸರ್ ಕಾರಿನಲ್ಲಿ ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ, 4 ನೇ ಆರೋಪಿಯಾದ ನೀವು 1 ರಿಂದ

3 ಮತ್ತು 5 ನೇ ಆರೋಪಿತರೊಂದಿಗೆ ಸೇರಿಕೊಂಡು, ಎರಡು ಮೋಟಾರ್ ಸೈಕಲ್ ಗಳಲ್ಲಿ ಬಂದು, ಕಾರನ್ನು ಅಡಗಟ್ಟಿ ತಡೆದು ನಿಲ್ಲಿಸಿ, ಬೈಕಿನಲ್ಲಿದ್ದ 4 ನೇ ಆರೋಪಿಯಾದ ನೀವು 1 ರಿಂದ 3 ಮತ್ತು 5 ನೇ ಆರೋಪಿತರೊಂದಿಗೆ ಸೇರಿಕೊಂಡು ಕಾರಿನ ಒಳಗೆ ಹತ್ತಿಕೊಂಡು ಸಾಕ್ಷಿ.1 ರವರನ್ನು ಕಾರಿನ ಹಿಂದಿನ ಸೀಟಿಗೆ ಎಳೆದುಕೊಂಡು, 1 ನೇ ಆರೋಪಿ ಕಾರನ್ನು ಚಾಲನೆ ಮಾಡಿಕೊಂಡು ಹಲವಾರುಕಡೆ ಸುತ್ತಾಡಿಸಿ, ಕುಣಿಗಲ್ ರಸ್ತೆಯಲ್ಲಿ ಮಹದೇವಪುರ ಬಳಿ ಬಂದು, ಸಾಕ್ಷಿ.1 ರವರಿಗೆ ಎಲ್ಲಾ ಆರೋಪಿಗಳು ಬೆದರಿಕೆ ಹಾಕಿ ಕೈಗಳಿಂದ ಹೊಡೆದು 1 ನೇ ಸಾಕ್ಷಿದಾರರಿಂದ 2 ನೇ ಆರೋಪಿ ಚಿನ್ನದ ಚೈನನ್ನು, 3 ನೇ ಆರೋಪಿ ಮೊಬೈಲ್ ಫೋನ್ ಅನ್ನು, 5 ನೇ ಆರೋಪಿ 25,000/- ರೂ. ನಗದು ಹಣವನ್ನು ಕಿತ್ತುಕೊಂಡು, ನಂತರ ಶಿವಗಂಗೆ ರಸ್ತೆ ಕಡೆಗೆ ಕಾರನ್ನು ಚಾಲನೆ ಮಾಡಿಕೊಂಡು ಹೋಗಿ, ಒಂದು ನೀಲಗಿರಿ ತೋಪಿನ ಬಳಿ ಕಾರಿನಿಂದ ಕೆಳಗೆ ತಳ್ಳಿ, 4 ನೇ ಆರೋಪಿಯಾದ ನೀವು 1 ರಿಂದ 3 ಮತ್ತು 5 ನೇ ಆರೋಪಿತರೊಂದಿಗೆ ಸೇರಿಕೊಂಡು ಎಲ್ಲರೂ ಸೇರಿ ಕಾರನ್ನು ದರೋಡೆ ಮಾಡಿದ್ದು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ದಂಡ ಸಂಹಿತೆ ಕಲಂ 395 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದಿನ ದಿನಾಂಕ 13 ನೇ ಜನವರಿ, 2026)

(ಶ್ರೀಮತಿ ಬಿ.ಎಸ್.ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.

**IN THE COURT OF THE PRL. DISTRICT AND SESSIONS JUDGE, BENGALURU RURAL DISTRICT, BENGALURU.**

**SC No.180/2024**

Complainant : Dabaspete Police station

V/s

Accused : A4. Handinaga @ Nagaraj

**PLEA OF THE ACCUSED**

1. Have you understood the charge framed, read over and explained to you?
Ans:

2. Do you plead guilty or claims to be tried?
Ans:

(Certified that in the open Court, charge is read over and explained to the accused in Kannada/English/Hindi and answers given by the accused are recorded).

Dated : 13-01-2026.

(Smt.B.S.Rekha)
Prl. District and Sessions Judge,
Bengaluru Rural District,
Bengaluru.

Signature of the accused